# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ, ನ.ರಾ.ಪುರ.

**ಸಿ.ಸಿ ನಂ 86/2019**

ಸಿ ಡಬ್ಲ್ಯು ಃ**-02**

ಸಾಕ್ಷಿದಾರರ ಹೆಸರು ಃ ನಾಗರಾಜ್ ಹೆಚ್ ಡಿ
ತಂದೆಯ ಹೆಸರು ಃ ದಾನಪ್ಪ
ವಯಸ್ಸು ಃ **55** ವರ್ಷ
ಉದ್ಯೋಗ ಃ ಎ ಎಸ್ ಐ, ಎನ್ ಆರ್ ಪುರ ಪೊಲೀಸ್ ಠಾಣೆ
ವಾಸಸ್ಥಳ ಃ ಎನ್ ಆರ್ ಪುರ.

**ಕಲಂ. 299 ಭಾ. ದಂ. ಸಂಹಿತೆ ಅಡಿಯಲ್ಲಿ ಸಾಕ್ಷಿದಾರರ ಮುಖ್ಯವಿಚಾರಣೆ**
ದಿನಾಂಕಃ**22.04.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ನ್ಯಾಯಾಲಯದಿಂದಃ

ನಾನು ದಿಃ 15/06/2020 ರಿಂದ ಇಲ್ಲಿಯವರೆಗೆ ಎನ್ ಆರ್ ಪುರ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿಃ 03.02.2026 ರಂದು ಈ ನ್ಯಾಯಾಲಯದ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ಆರೋಪಿತನ ವಿರುದ್ಧ ಉದ್ಘೋಷಣೆ ಮಾಡಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಮನವಿ ಬಂದಿರುತ್ತದೆ. ದಿಃ 17.02.2026 ರಂದು ನಾನು ಶಿವಮೊಗ್ಗದ ಗಾಂಧಿನಗರ ಇಲ್ಲಿ ಹೋಗಿ ಆರೋಪಿತನ ಬಗ್ಗೆ ವಿಚಾರಿಸಲಾಗಿ ಮನೆಗೆ ಬೀಗ ಹಾಕಿತ್ತು ಹಾಗೂ ಸದರಿಯವರ ಮನೆಯನ್ನು ಪರಿಶೀಲಿಸಲಾಗಿ ಸದರಿ ಮನೆಯ ಹೆಸರು ತುಳಜಾ ಭವಾನಿ ನಿಲಯ ಎಂದು ಹೆಸರು ಇದ್ದು ಹಾಗೂ ಸದರಿಯವರ ಮನೆ, ಮಹಾನಗರ ಪಾಲಿಕೆ 1 ಮತ್ತು 2 ರ ವಿಭಾಗದಲ್ಲಿ ಹಾಗೂ ಗಾಂಧಿ ಪಾರ್ಕ್ ನ ಸಾರ್ವಜನಿಕ ಗೋಡೆಗೆ ಉದ್ಘೋಷಣಾ ವಾರೆಂಟ್ ಅನ್ನು ಅಂಟಿಸಿ, ಪಂಚರದಾರರ ಸಮಕ್ಷಮ ಮಹಜರನ್ನು ಮ.1.30 ರಿಂದ 2.30 ಗಂಟೆಯವರೆಗೆ ಮಾಡಿರುತ್ತೇನೆ ಹಾಗೂ ಸದರಿ ಪ್ರೊಕ್ಲಮೇಷನ್ ವಾರೆಂಟ್ ಜಾರಿಗೊಳಿಸುವ ಕಾಲಕ್ಕೆ ಭಾವಚಿತ್ರಗಳನ್ನು ತೆಗೆಸಿರುತ್ತೇನೆ.

2. ಅದೇ ದಿನ ಮಾನ್ಯ ಆಯುಕ್ತರು ಮಹಾನಗರ ಪಾಲಿಕೆ, ಶಿವಮೊಗ್ಗ ಹಾಗೂ ತಹಶೀಲ್ದಾರ್, ಶಿವಮೊಗ್ಗ ಇವರಿಗೆ ಆರೋಪಿಗೆ ಸಂಬಂಧಿಸಿದ ವಾಸ ಸ್ಥಳ ದೃಢೀಕರಣ ಪತ್ರ ಹಾಗೂ ಯಾವುದಾದರೂ ಸ್ಥಿರ ಮತ್ತು ಚರ ಆಸ್ತಿಗಳು ಇರುವ ಬಗ್ಗೆ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದ್ದು, ದಿಃ 21.02.2026 ರಂದು ಮಹಾನಗರ ಪಾಲಿಕೆ, ಶಿವಮೊಗ್ಗ ಇವರು ಆರೋಪಿಯ ಹೆಸರಿನಲ್ಲಿ ಯಾವುದೇ ಖಾತೆ ದಾಖಲಾಗಿರುವುದಿಲ್ಲ ಎಂದು ಹಾಗೂ ದಿಃ 17.03.2026 ರಂದು ತಹಶೀಲ್ದಾರ್ ಕಚೇರಿಯವರು ಆರೋಪಿಯ ಹೆಸರಿನಲ್ಲಿ ಯಾವುದೇ ಸ್ಥಿರ ಮತ್ತು ಚರ ಆಸ್ತಿಗಳು ಇರುವುದಿಲ್ಲ ಎಂದು ದಾಖಲೆಯನ್ನು ನನಗೆ ನೀಡಿರುತ್ತಾರೆ. ನಂತರ ನಾನು ನ್ಯಾಯಾಲಯಕ್ಕೆ ಪ್ರೊಕ್ಲಮೇಷನ್ ಜಾರಿಗೊಳಿಸಿದ ಬಗ್ಗೆ ವರದಿಯನ್ನು ನೀಡಿರುತ್ತೇನೆ.

3. ಸಾಕ್ಷಿಯು ತಾವು ಮಾಡಿದ ಉದ್ಘೋಷಣಾ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು ನಿಪಿ 12 ಅನ್ನು ಮಾಡುವ ಕಾಲಕ್ಕೆ ತೆಗೆದ 4 ಭಾವಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 13 ರಿಂದ 16 ಎಂದು ಗುರುತಿಸಲಾಯ್ತು. ಸಾಕ್ಷಿಯು ಶಿವಮೊಗ್ಗ ಮಹಾನಗರ ಪಾಲಿಕೆ ಹಾಗೂ

ತಹಶೀಲ್ದಾರ್ ರವರಿಗೆ ಮಾಹಿತಿ ಕೋರಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ 17 ರಿಂದ 18 ಎಂದು, ಸಾಕ್ಷಿಯ ಸಹಿಯನ್ನು 17 (ಎ) 18(ಎ) ಹಾಗೂ 19(ಎ) ಎಂದು ಗುರುತಿಸಲಾಯಿತು. ದಿಃ 21.02.2026 ರಂದು ಹಾಗೂ ದಿಃ 17.03.2026 ರಂದು ಶಿವಮೊಗ್ಗ ಮಹಾನಗರ ಪಾಲಿಕೆ ಮತ್ತು ತಹಶೀಲ್ದಾರ್ ರವರು ನೀಡಿದ ಮಾಹಿತಿಯ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 20 ಮತ್ತು 21 ಎಂದು, ಸಾಕ್ಷಿಯು ತಾವು ಪ್ರೊಕ್ಲಮೇಷನ್ ಕಾರ್ಯವನ್ನು ಕಾರ್ಯಗತಗೊಳಿಸಿ ಸಲ್ಲಿಸಿದ ವರದಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 22 ಎಂದು ಗುರುತಿಸಲಾಯಿತು.

ಮರು ವಿಚಾರಣೆ ಃ ಇಲ್ಲ ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ